## ತೊಪ್ಪಲ ಪಲ್ಯಾ



ಕಲೆ: ಗಣೇಶ ಆಚಾರ್ಯ

ಮಕ್ಕಳ ತೊದಲ್ನುಡಿ ಆ ಮುಗ್ಧತೆಗೆ ಮನ ಸೋಲದವರಾರು? ನಮ್ಮ ಹಿರಿಯ ಮಗ ಸ್ವರೂಪ ಚಿಕ್ಕವನಿದ್ದಾಗಿನಿಂದಲೂ 'ಆಟಕ್ಕೆ ಜೈ ಊಟಕ್ಕೂ ಸೈ ಪಾಠ ಮಾತ್ರ ನೈ ನೈ' ಸ್ವಭಾವದವನು.

ಆ ದಿನ ಏಕಾದಶಿ ಪ್ರಯುಕ್ತವಾಗಿ ಗುಡಿಯಲ್ಲಿ ಶ್ರೀಕೃಷ್ಣನಿಗೆ ತುಳಸಿ ಅರ್ಚನೆ ನಡೆದಿತ್ತು. ಮುಖ ಮಾತ್ರ ಕಾಣುವಂತೆ ತುಳಸಿ ದಳಗಳಲ್ಲಿ ನಗುತ್ತಿದ್ದ ಶ್ರೀಕೃಷ್ಣನನ್ನು ಇವನು ನೋಡಿದ್ದಾನೆ. ದಾಪುಗಾಲು ಇಡುತ್ತಾ ಹೊರಗೆ ಇರೋ ಅಮ್ಮನ ಬಳಿ ಬಂದು, 'ಅಮ್ಮಾ ಬಾ ಇಲ್ಲೆ ಲಗೂ ಬಾsss!' ಅಚ್ಚರಿಯೊಂದಿಗೆ ಗಾಬರಿಗೊಂಡಿದ್ದು ಆತನ ಮುಖದಲ್ಲಿ ಸ್ಪಷ್ಟವಾಗಿತ್ತು. 'ಯಾಕೋ ಏನಾತು?' ಎನ್ನುತ್ತ ಗಡಬಡಿಸಿ ಅಮ್ಮ ಗರ್ಭ ಗುಡಿವರೆಗೂ ಹೋದಾಗ, 'ಅಮ್ಮಾ ನೋಡಲ್ಲಿ ದೇವರಿಗೆ ತೊಪ್ಪಲ ಪಲ್ಯಾ ಹಾಕ್ಯಾರ!' ಎಂದಾಗ ನಮಗೆಲ್ಲ ನಗುವೇ ನಗು.

**ಶ್ರೀವಲ್ಲಭ ರಾ. ಕುಲಕರ್ಣಿ**

---

## ಎಲ್ಲಮ್ಮಾ ಬಂತು?

ನನ್ನ ಮಗಳಿಗೆ ಆಗ ಐದು ವರ್ಷ. ಪ್ರತಿ ವರ್ಷವೂ ಹೊಸ ವರ್ಷದ ದಿನದಂದು ನನ್ನ ಗೆಳತಿಯರೆಲ್ಲಾ ಸೇರಿ ಪಟಾಕಿ ಒಡೆದು, ಸಿಹಿ ಹಂಚಿ ಒಬ್ಬರಿಗೊಬ್ಬರು ಶುಭಾಶಯ ಕೋರುತ್ತಿದ್ದರು.

ಆ ವರ್ಷ ನನ್ನ ಮಗಳು ಮಾತ್ರ ಸಡನ್ನಾಗಿ ಅಳುತ್ತಾ 'ಎಲ್ಲಮ್ಮಾ ಬಂತು? ನನಗೆ ಮಾತ್ರ ಹೊಸ ವರ್ಷ ಕಾಣ್ತಾ ಇಲ್ಲಾ, ಎಲ್ಲಿ ತೋರ್ಸಮ್ಮಾ?' ಎಂದು ಕಣ್ಣೊರೆಸುತ್ತಾ ಕೇಳಿದಳು. ಮಗಳ ಮುಗ್ಧತೆಗೆ ಜತೆಗಿದ್ದವರೆಲ್ಲ ಜೋರಾಗಿ ನಕ್ಕರು.

ಈಗಲೂ ಪ್ರತಿ ಸಾರಿ ಹೊಸ ವರ್ಷ ಆಚರಿಸಿ ಸಂಭ್ರಮಾಚರಣೆ ಮಾಡುವಾಗ ಈ ಸಂಗತಿ ನೆನಪಾಗುತ್ತದೆ.

ಈಗ ದೊಡ್ಡವಳಾಗಿರುವ ನನ್ನ ಮಗಳ ಆ ಮಾತನ್ನು ನೆನಪಿಸಿ ಕೊಂಡು ನಾನು ಮತ್ತು ಮಗಳು ಇಬ್ಬರೂ ನಗುತ್ತಿರುತ್ತೇವೆ.

**-ಅನಸೂಯ ತ್ರಿವಿಕ್ರಮ್**

